ಶ್ರೀ ವೀರಭದ್ರಪ್ಪ ಈರಪ್ಪ.—ಈ 28 ಸೊಸೈಟಿಗಳಲ್ಲಿ ಎಷ್ಟು ಸೊಸೈಟಿಗಳು ಕೆಲಸಮಾಡುತ್ತಿವೆ, ಎಷ್ಟು ಸೊಸೈಟಿಗಳು ನ್ಯಗಿತವಾಗಿವೆ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಲ್ಪ ಹೆಚ್ಚು ಕಮ್ಮಿ ಎಲ್ಲಾ ನ್ಯಗಿತವಾಗಿವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಈ ಸೊಸೈಟಿಗಳ ರೆಕ್ಕಪತ್ರಗಳನ್ನು ತಾಳೆ ನೋಡುವುದಕ್ಕೆ ಪ್ರಯತ್ನ ಮಾಡಿ ಎಷ್ಟು ದಿವಸವಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಬಹಳ ಹಳೆಯ ಕಥೆ. ಹೈದರಾಬಾದ್ ನರ್ಕಾರವಿದ್ದಂಥ ಕಾಲದಲ್ಲಿ ನೇಮಕ ಮಾಡಿದ್ದು. ಈಚೆಗೆ ಇದಕ್ಕೆ ಎನ್‌ಕ್ವೈರಿ ಮಾಡಬೇಕೆಂದು ಒಬ್ಬ ಎನ್‌ಕ್ವೈರಿ ಆಫಿನರನ್ನು ಅಪಾಯಿಂಟ್ ಮಾಡಿದೆ. ಆ ಎನ್‌ಕ್ವೈರಿ ಮಾಡುವುದಕ್ಕೆ ರೆಕಾರ್ಡ್‌ಗಳೆಲ್ಲಾ ಕೊರ್ಟಿನಲ್ಲಿರುವುದರಿಂದ ಅದೂ ಕೂಡ ಮಾಡುವುದಕ್ಕಾಗದೆ ಇದೆ.

ಶ್ರೀ ವೀರಭದ್ರಪ್ಪ ಈರಪ್ಪ.—ನಂಘಗಳಲ್ಲಿ ಹಣದ ದುರುಪಯೋಗವಾಗಿರವುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ರೆಕ್ಕ ಸ್ವಲ್ಪ ಹೆಚ್ಚು ಕಮ್ಮಿ ಇದೆ. ಹಣದ ದುರುಪಯೋಗ ಸ್ವಲ್ಪವಾಗಿದೆ.

ಶ್ರೀ ಕೆ. ಲಕ್ಕಪ್ಪ.—ಈ ನಂಘಗಳು ಕಾನೂನು ಪ್ರಕಾರ ರಿಜಿಷ್ಟರ್ ಆಗಿರತಕ್ಕ ನಂಘಗಳೋ, ಅಥವಾ ಅನಧಿಕೃತವಾಗಿ ಮಾಡಿಕೊಂಡಿರುವ ನಂಘಗಳೋ ?

ಶ್ರೀ ಕೆ. ಪುಟ್ಟಸ್ವಾಮಿ.—ಅನಧಿಕೃತ ನಂಘಗಳಾಗಿದ್ದರೆ ನಾನು ಉತ್ತರ ಹೇಳುತ್ತಿರಲಿಲ್ಲ. ಆದರಿಂದಾಗಿ ಇವುಗಳು ಅಧಿಕೃತ ನಂಘಗಳು.

Construction of Houses to Girijans

*Q.—399. Sri K. L. SHIVALINGE GOWDA (Virupakshipura).—

Will the Government be pleased to state :—

(*a*) the amount sanctioned for the construction of houses to Girijans in Hulya Colony of Uyyamballi Hobli, Kanakapura Taluk ;

(*b*) the total number of houses that are to be constructed there ;

(*c*) the number of houses completed so far ;

(*d*) the amount received by the contractor so far ;

(*e*) whether the construction of houses is being carried out fully out of the Government funds or whether the Girijans are also required to contribute their share in this behalf ?

A.—Sri S. NIJALINGAPPA (Chief Minister).—

(*a*) Rs. 20,000

(*b*) 25.

(*c*) 7.

(*d*) Rs. 16,997.85.

(*e*) The entire cost is borne by Government.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—25 ಮನೆಗಳನ್ನು ಕಟ್ಟಬೇಕಾದರೆ ಮಂಜೂರಾಗಿ ಎಷ್ಟು ವರ್ಷವಾಯಿತು.

ಶ್ರೀ ಎಸ್. ನಿಜಲಿಂಗಪ್ಪ.—ಮಂಜೂರಾಗಿ ಬಹಳ ದಿವಸವಾಗಿ ಹೋಯಿತು. 7-8 ವರ್ಷವಾಯಿತೆಂದು ಕಾಣುತ್ತದೆ.

ಶ್ರೀ ಕೆ. ಎರ್. ಶಿವಲಿಂಗೇಗೌಡ.—25 ಮನೆಗಳು ಮಂಜೂರಾಗಿ ಬಹಳ ದಿವಸಗಳಿಂದಲೂ ಬರೀ 7 ಮನೆಗಳಾಗಿವೆಯೆಂದು ಹೇಳುತ್ತೀರಿ, ಆಷ್ಟು ಮನೆಗಳನ್ನು ಕಟ್ಟುವುದಕ್ಕೆ ಇಷ್ಟು ದಿವಸ ಗಳನ್ನು ಕೊಡುವುದೇ ?

ಶ್ರೀ ಎಸ್. ನಿಜಲಿಂಗಪ್ಪ.—ಮೊದಲು 75 ರೂಪಾಯಿಗಳನ್ನು ಮನೆ ಕಟ್ಟುವುದಕ್ಕೆ ಕೊಟ್ಟರು, ಮನೆಗಳನ್ನು ಕಟ್ಟಲಲ್ಲ. ಆದರಮೇಲೆ, 2 ವರ್ಷವಾದಮೇಲೆ ಒಂದು ಕಮಿಟಿಯವರು ಹೋಗಿ ಅವರಿಂದ ಮನೆ ಕಟ್ಟಿಸುವುದಕ್ಕಾಗುವುದಿಲ್ಲ, ಹೊಸದಾಗಿ ಮನೆಗಳನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಬಿ. ಚೆನ್ನಬೈರೇಗೌಡ.—ಕಂಟ್ರಾಕ್ಟರಿಗೆ ಪೇಮೆಂಟ್ ಆಗಿರುವುದು 16,997-85 ರೂಪಾಯಿಗಳು, ಮನೆ ಕಟ್ಟಿ ಪೊರ್ತೈಸಿರುವುದು 7, 18 ಮನೆ ಬಾಕಿ ಇವೆ. ದುಡ್ಡು ಹೆಚ್ಚು ಪೇಮೆಂಟ್ ಆಗಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಹಾಸ್ತಿ ಪೇಮೆಂಟ್ಸ್ ಆಗಿಲ್ಲ, ಮನೆ ಕಟ್ಟುತ್ತಿದ್ದಾರೆ.

ಶ್ರೀ ಎಸ್. ನುಬ್ಬಯ್ಯನಾಯಕ್.—ಒಂದು ಮನೆಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—1,300 ಚಿಲ್ಲರೆಯೆಂದು ಕಾಣುತ್ತದೆ, ಸ್ಪಷ್ಟವಾಗಿ ಗೊತ್ತಿಲ್ಲ.

ಶ್ರೀ ಕೆ. ಲಕ್ಕಪ್ಪ.—ಗಿರಿಜನರ ಮನೆಗಳನ್ನು ಕಟ್ಟಿಸುವುದಕ್ಕಾಗಿ ಎಂಟು ವರ್ಷ ನಿಧಾನ ವಾಗಿರುವುದು ಆಡಳಿತದ ವಿಳಂಬ ನೀತಿಯನ್ನು ಸ್ಪಷ್ಟಪಡಿಸುವುದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಕೆ. ಎರ್. ಶಿವಲಿಂಗೇಗೌಡ.—ಒಂದು ಮನೆಗೆ ಅಂದಾಜು 1,300 ರೂಪಾಯಿಗಳು ಎಂದು ತಿಳಿಸಿದ್ದೀರಿ, ಅಂದರೆ 7 ಮನೆಗಳಿಗೆ, ಮನೆಗೆ 1,300 ರೂಪಾಯಿಗಳ ಪ್ರಕಾರ 16,000 ಚಿಲ್ಲರೆಯಾಗುವುದಿಲ್ಲ, ಕೆಲಸಮಾಡಿರುವುದಕ್ಕೆ ಮುಂಚಿತವಾಗಿ ಕಂಟ್ರಾಕ್ಟರಿಗೆ ಹಣ ಕೊಟ್ಟಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಕೊಟ್ಟಿದೆ. ಅದಕ್ಕೆ ಮುಂಚೆ ಮೆಟೀರಿಯಲ್ಸ್ ಕೂಡ ಲೆಕ್ಕಕ್ಕೆ ತೆಗೆದುಕೊಂಡಿದೆ.

ಶ್ರೀ ಬಿ. ಬೈರಪ್ಪಾಜಿ.—ಒಂದು ಮನೆಗೆ 1,300 ರೂಪಾಯಿಯಂತೆ ಖರ್ಚುಮಾಡುವುದಕ್ಕೆ ನಿರ್ಧರಿಸಿದ್ದೀರಿ, ಮನೆಗಳನ್ನು ಇನ್ನು ಎಷ್ಟು ವರ್ಷಗಳಲ್ಲಿ ಪೂರ್ತಿಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಕೆಲವೇ ತಿಂಗಳುಗಳಲ್ಲಿ ಪೂರೈಸುತ್ತೇವೆ.

ಶ್ರೀ ಎಸ್. ನುಬ್ಬಯ್ಯನಾಯಕ್.—ಮನೆಗಳನ್ನು 7-8 ವರ್ಷಕ್ಕೆ ಹಿಂದೆ ಮಂಜೂರು ಮಾಡಿದ್ದೆಂದು ಹೇಳುತ್ತೀರಿ, ಆ ಕಾಲದಲ್ಲಿ ಒಂದು ಮನೆಗೆ 400-500 ರೂಪಾಯಿಗಳನ್ನು ಗಿರಿಜನರಿಗೆ ಕೊಡುತ್ತಿತ್ತು, ಅನಂತರ 750 ರೂಪಾಯಿ ಕೊಡುತ್ತಿದ್ದರು; ಈಗ 1,300 ರೂಪಾಯಿಗಳನ್ನು ಯಾವ ಆಧಾರದ ಮೇರೆ ತಾವು ಕೊಡುವುದು ?

ಶ್ರೀ ಎಸ್. ನಿಜಲಿಂಗಪ್ಪ.—ರೇಟ್ಸ್ ಹಾಸ್ತಿಯಾಗಿದೆ, ಆದರೂ ನಷ ಕಟ್ಟಿಸಿಕೊಡಬೇಕು.

ಶ್ರೀ ಕೆ. ಎರ್. ಶಿವಲಿಂಗೇಗೌಡ.—ಒಂದು ಸಮಿತಿಯವರು ಹೋಗಿ ಕಂಟ್ರಾಕ್ಟರಿಂದ ಈ ಕೆಲಸ ವಾಗುವುದಿಲ್ಲ, ಬೇರೆಯವರಿಗೆ ಕೊಡಿಯೆಂದು ರೆಕಮೆಂಡ್ ಮಾಡಿದರು. ಈಗ ಈ ಕೆಲಸವನ್ನು ಬೇರೆಯವರಿಗೆ ಕೊಟ್ಟಿದ್ದೀರೋ ಅಥವಾ ಅದೇ ಕಂಟ್ರಾಕ್ಟರ್ ಮಾಡುತ್ತಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದರ ವಿಚಾರ ನನ್ನ ಹತ್ತಿರ ಇಲ್ಲ. ಬೇರೆ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೋ ಇಲ್ಲವೋ ಹೇಳಲಾರೆ.

Sri N. O. SAMAJI.—(Marathi).

Mr. SPEAKER.—That has been already replied.

ಶ್ರೀ ಕೆ. ಎರ್. ಶಿವಲಿಂಗೇಗೌಡ.—ತಪ್ಪು ಪ್ರಶ್ನೆಯ ಉತ್ತರದಲ್ಲಿ 7 ಮನೆಗಳು ಕಟ್ಟಿ ಮುಗಿದಿವೆಯೆಂದು ಹೇಳಿದ್ದೀರಿ, ಆದರೆ 2 ಮನೆ ಮಾತ್ರ ಕಟ್ಟಿ ಮುಗಿದಿದೆ, 5 ಮನೆ ಕಟ್ಟಿಲ್ಲ, 7 ಮನೆಗಳು ಎಂದು ಹೇಳಿರುವುದು ತಪ್ಪು !

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಬಂದಿರುವ ವರದಿಯಲ್ಲಿ 7 ಮನೆಯೆಂದು ಇದೆ. ಮಾನ್ಯ ಸದಸ್ಯರು ನೋಡಿ 2 ಮನೆಯೆಂದು ಹೇಳಿದರೂ ಸಹ ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—25 ಮನೆಗಳಲ್ಲಿ 7 ಮನೆಗಳನ್ನು ಕಟ್ಟಿ ಮುಗಿಸಿದ್ದಾರೆ. Deputy Minister for Planning ಅವರು ಅಲ್ಲಿಗೆ ಹೋದಾಗ ಉಳಿದ 18 ಮನೆಗಳನ್ನು ಮುಂದಿನ ವರ್ಷವೇ ಕಟ್ಟಿಸಿ ಕೊಡುವುದಾಗಿ ಮಾತುಕೊಟ್ಟು ಬಂದಿದ್ದಾರೆ, ಅದು ನಿಜವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾತು ಕೊಟ್ಟು ಬಂದಿದ್ದು ನನಗೆ ಗೊತ್ತಿಲ್ಲ.

Cadre and Recruitment Rules of Graduate Teachers.

*Q.—409. Smt. RATHNAMMA MADHAVA RAO (Shimoga).—

Will the Government be pleased to state :—

whether the Cadre and Recruitment Rules regarding promotions, pay scales, etc., of Graduate Teachers have been finalised ?

A.—Sri S. R. KANTHI (Minister for Education).—

(a) No.

ಶ್ರೀಮತಿ ರತ್ನಮ್ಮ ಮಾಧವರಾವ್.—ಪ್ರಶ್ನೆಗೆ ಉತ್ತರವಾಗಿ "No" ಎಂದು ಇದೆ, "why" ಎಂದು ಕೇಳುತ್ತೇನೆ.

† ಶ್ರೀ ಎಸ್. ಆರ್. ಕಂಠಿ.—ತಾವು ಕೇಳಿದ ಪ್ರಶ್ನೆಗೆ "ನೊ" ಎಂದು ಉತ್ತರ ಕೊಟ್ಟಿದೆ, ಏತಕ್ಕೆ ಎಂದರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪಿ. ಎಸ್. ಸಿ. ಗೆ ಹೋಗಿದೆ. ಅಲ್ಲಿಂದ ಬರುವುದಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈಗ 9 ವರ್ಷದಿಂದ ಪ್ರಶ್ನೆ ಬರುತ್ತಿದೆ, "ನೊ" ಎಂದು ಉತ್ತರ ಹೇಳುತ್ತಿದ್ದೀರಿ, ಇನ್ನೂ ಎಷ್ಟು ವರ್ಷಗಳಾಗಬಹುದು ? ಆಗುತ್ತದೋ ಇಲ್ಲವೋ ಕೊನೆಯದಾಗಿ ಹೇಳಿ ?

ಶ್ರೀ ಎಸ್. ಆರ್. ಕಂಠಿ.—ಅಗಲೇ ಹೇಳಿವೆ, ಪಿ. ಎಸ್. ಸಿ. ಗೆ ರೂಲ್ಸ್ ಮಾಡಿ ಕಳಿಸಿದೆ ಯೆಂದು. ಅವರು ಅದನ್ನು ಸ್ಕ್ರುಟಿನಿ ಮಾಡುತ್ತಿದ್ದಾರೆ, ಇಷ್ಟರಲ್ಲೇ ಬರುವ ನಿರೀಕ್ಷೆಯೂ ಇದೆ. ಅದು ಬಂದ ಮೇಲೆ ಕ್ಯಾಬಿನೆಟ್‌ನಲ್ಲಿ ಕನ್‌ಸಿಡರ್ ಮಾಡುತ್ತೇವೆ.

Uniform Policy with regard to Service Conditions of Teachers in different High Schools.

*Q.—298. Sri D. PARAMESHWARAPPA (Honnali).—

Will the Government be pleased to state :—

(a) the number of Municipal and Taluk Board High Schools in Old Mysore State ;

(b) the number of teachers working in these High Schools ;

(c) whether the service conditions applicable to the teachers working in Government High Schools apply for the teachers working in Municipal and Taluk Board High Schools ;

(d) whether Government intend converting the Municipal High Schools in the Old Mysore Area into single Unit High Schools ;